■ ಕರ್ನಾಟಕ ನಾಮಕರಣ ಸಂಭ್ರಮ-50 ■ ಅನ್ಯಭಾಷಿಕರಿಗೆ ಕನ್ನಡ ಕಲಿಸಿ; ಕನ್ನಡ ಮಾತನಾಡಿ ■ ಮುಖ್ಯಮಂತ್ರಿ ಸಿದ್ದರಾಮಯ್ಯ ಆಶಯ

# 'ಕರ್ನಾಟಕ ಸಂಪೂರ್ಣ ಕನ್ನಡಮಯ'ವಾಗಲಿ

ಪ್ರಜಾಪಥ ವಾರ್ತೆ

ಡಿ. ದೇವರಾಜ ಅರಸ್ ಮಂಟಪ-ಕೆ.ಎಚ್. ಪಾಟೀಲ ವೇದಿಕೆ (ಗದಗ): ಹರಿದು ಹಂಚಿಹೋಗಿದ್ದ ಕನ್ನಡ ಭಾಷಿಕರು ಒಂದುಗೂಡಿ 67 ವರ್ಷ, ಕರ್ನಾಟಕ ನಾಮಕರಣಗೊಂಡು 50 ವರ್ಷವಾದರೂ ಕರ್ನಾಟಕದಲ್ಲಿ ಇನ್ನೂ ಸಂಪೂರ್ಣ ಕನ್ನಡಮಯವಾಗಿಲ್ಲದಿರುವುದು ನೋವು ತಂದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಳವಳ ವ್ಯಕ್ತಪಡಿಸಿದರು.

ಮೈಸೂರು ರಾಜ್ಯಕ್ಕೆ 'ಕರ್ನಾಟಕ' ನಾಮಕರಣಗೊಂಡು 50 ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ನಗರದ ದಿ.ಗದಗ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಡಿ. ದೇವರಾಜ ಅರಸ ಮಂಟಪದ ಕೆ.ಎಚ್. ಪಾಟೀಲ ವೇದಿಕೆಯಲ್ಲಿ ಶುಕ್ರವಾರ ನಡೆದ 'ಕರ್ನಾಟಕ ಸಂಭ್ರಮ-50' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕರ್ನಾಟಕ ನಾಮಕರಣ ಆಗಲು ಶ್ರಮಿಸಿ ಹೋರಾಡಿದ ಕೆ.ಎಚ್.ಪಾಟೀಲ್ ಮತ್ತು ಎಲ್ಲಾ ಹೋರಾಟದ ಸಂಗಾತಿಗಳನ್ನು ಇಂದು ನಾನು ಸ್ಮರಿಸುತ್ತೇನೆ.

ಇಂಗ್ಲಿಷ್ ನಲ್ಲಿ ಶೇಕ್ಸ್ ಪಿಯರ್ ಸಾಹಿತ್ಯ ರಚಿಸುವುದಕ್ಕೂ 500 ವರ್ಷಗಳ ಮೊದಲೇ ಕನ್ನಡದಲ್ಲಿ ವಿಶ್ವ ಮಟ್ಟದ ಅತ್ಯುನ್ನತ ಸಾಹಿತ್ಯ ರಚನೆಯಾಗಿತ್ತು. ಪಂಪನಿಂದ ಹಿಡಿದು ವಚನಕಾರರನ್ನೂ ಸೇರಿಸಿ ಹಲವರು ಅತ್ಯುನ್ನತ ಸಾಹಿತ್ಯ ರಚಿಸಿದ್ದರು ಎಂದು ಕನ್ನಡ ಭಾಷಾ ಹಿರಿಮೆಯನ್ನು ಉದಾಹರಿಸಿದರು. ಕನ್ನಡ ಕಲಿಯದೆಯೂ ಕರ್ನಾಟಕದಲ್ಲಿ ವ್ಯವಹರಿಸ ಬಹುದು ಎನ್ನುವ ವಾತಾವರಣ ಬದಲಾಗಬೇಕು. ಕನ್ನಡದ ಸಂಸ್ಕೃತಿ ಜತೆಗೆ ನಮ್ಮೆಲ್ಲರಲ್ಲಿ ಕನ್ನಡತನ ಬೇರೂರಬೇಕು. ಆಗ ಮಾತ್ರ ಕನ್ನಡದ ವಾತಾವರಣ ಇಡಿ ನಾಡಿನಲ್ಲಿ ಪಸರಿಸುತ್ತದೆ.

ಕನ್ನಡ ಸಂಸ್ಕೃತಿ ಎಂದಾಗ ಬಸವಾದಿ ಶರಣರ ಕಾಯಕ ಸಂಸ್ಕೃತಿಯೂ ಸೇರಿದೆ. ಬಸವಣ್ಣನವರ ಆಶಯದಂತೆ ವರ್ಗರಹಿತ, ಜಾತಿರಹಿತ ಸಮಾಜದ ನಿರ್ಮಾಣ ಮತ್ತು ಈ ಸಮಾಜದ ಅಭಿವೃದ್ಧಿ ನಮ್ಮ ಗುರಿಯಾಗಿದೆ. ಆ ಕಾರಣಕ್ಕೇ ಸರ್ವ ಜಾತಿ-ಧರ್ಮದವರ ಬದುಕನ್ನು ಎತ್ತರಿಸುವ ಗ್ಯಾರಂಟಿ ಕಾರ್ಯಕ್ರಮಗಳನ್ನು ನಾವು ನೀಡಿದ್ದೇವೆ ಎಂದರು.

ಕೆ.ಎಚ್. ಪಾಟೀಲರು ಗದಗ-ಬೆಟಗೇರಿಗೆ ನೀರು ತರುವಲ್ಲಿ ಯಶಸ್ವಿಯಾದರು. ಹಿಂದಿನ ಅವಧಿಯಲ್ಲಿ ನಾನು ಸಿಎಂ ಆಗಿದ್ದಾಗ ಗ್ರಾಮೀಣಾಭಿವೃದ್ಧಿ ಇಲಾಖೆ ಸಚಿವರಾಗಿದ್ದ ಎಚ್.ಕೆ. ಪಾಟೀಲ ಅವರು ಇಡೀ ಜಿಲ್ಲೆಯ ಗ್ರಾಮೀಣ ಪ್ರದೇಶಕ್ಕೆ ನದಿ ನೀರು ಯೋಜನೆ ಜಾರಿಗೊಳಿಸಿದರು. ಸ್ವತಃ ನನ್ನ ಜಿಲ್ಲೆಗೂ ಆಗದ ಕೆಲಸ ಇಲ್ಲಿ ಮಾಡಿದ್ದಾರೆ. ಜೊತೆಗೆ ದೇಶದಲ್ಲೇ ಮೊದಲ ಗ್ರಾಮೀಣಾಭಿವೃದ್ಧಿ ವಿವಿ ಸ್ಥಾಪನೆ ಸೇರಿ ಇಡೀ ರಾಜ್ಯಕ್ಕೆ ಉತ್ತಮ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಹೀಗಾಗಿ ನಾಮಪತ್ರ ಸಲ್ಲಿಸಿದರೆ ಸಾಕು, ನೀವೆಲ್ಲಾ ಹೆಚ್.ಕೆ.ಪಾಟೀಲರನ್ನು ಗೆಲ್ಲಿಸಬೇಕು. ಇಡೀ ರಾಜ್ಯಕ್ಕೆ ಅಷ್ಟೊಂದು ಕೆಲಸ ಮಾಡಿರುವ ಹೆಚ್.ಕೆ.ಪಾಟೀಲರು ಮತ ಕೇಳಬಾರದು. ನೀವೆಲ್ಲಾ ಅವರನ್ನು ಹಾಗೇ ಗೆಲ್ಲಿಸಬೇಕು ಎಂದು ಕರೆ ನೀಡಿದರು.

»ಕೊನೆ ಪುಟಕ್ಕೆ...




> ಬಡವರು ಆರ್ಥಿಕವಾಗಿ ಸಬಲರಾಗಲು, ಹಿಂದುಳಿದವರಿಗೆ ಶಕ್ತಿ ತುಂಬಲು ಐದು ಗ್ಯಾರಂಟಿಗಳ ಅನುಷ್ಠಾನ ಮಾಡಲಾಗುತ್ತಿದೆ. ಜೊತೆಗೆ ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಗೀತೆಗೆ ಪೂರಕವಾಗಿ ಸರ್ಕಾರ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.
>
> -ಸಿದ್ದರಾಮಯ್ಯ, ಮುಖ್ಯಮಂತ್ರಿ

> ಗದಗ ಜಿಲ್ಲೆಯು ಅಭಿವೃದ್ಧಿ ಪಥದಲ್ಲಿ ಉತ್ತುಂಗಕ್ಕೇರಿದೆ. ಸಚಿವ ಎಚ್.ಕೆ. ಪಾಟೀಲ ಅವರು ಆರಂಭಿಸಿದ ಶುದ್ಧ ನೀರಿನ ಘಟಕಗಳ ಮಾದರಿಯನ್ನು ನನ್ನ ಮತಕ್ಷೇತ್ರದಲ್ಲೂ ಅಳವಡಿಸಿದೆ. ನಂತರ ಸರಕಾರದ ಕಾರ್ಯಕ್ರಮವಾಗಿ ರಾಜ್ಯ ಮತ್ತು ರಾಷ್ಟ್ರಾದ್ಯಂತ ವಿಸ್ತರಿಸಲಾಯಿತು.
>
> -ಡಿ.ಕೆ. ಶಿವಕುಮಾರ, ಉಪಮುಖ್ಯಮಂತ್ರಿ

> 1973ರಲ್ಲಿ ಅಂದಿನ ಸಿಎಂ ದೇವರಾಜ ಅರಸ್ ಹಾಗೂ ಗದಗದ ಸಚಿವರಾಗಿದ್ದ ಕೆ ಎಚ್ ಪಾಟೀಲರು ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣಕ್ಕೆ ನಿರ್ಣಯಿಸಿದ್ದು ಇತಿಹಾಸ. ಇದೀಗ 50 ವರ್ಷಗಳ ನಂತರ ಕರ್ನಾಟಕ ನಾಮಕರಣ ಸುವರ್ಣ ಮಹೋತ್ಸವ ಅವಕಾಶ ಸಿಕ್ಕಿದ್ದು ಖುಷಿಯ ಸಂಗತಿ.
>
> -ಎಚ್.ಕೆ. ಪಾಟೀಲ, ಜಿಲ್ಲಾ ಉಸ್ತುವಾರಿ ಸಚಿವ

## ಸಾಮ್ಯತೆ ಕೂಡಿಬಂದಿದ್ದು ಕಾಕತಾಳೀಯ..

ಗದಗ: 1973ರ ನ. 3 ರಂದು ದಿ. ಗದಗ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ನಡೆದ 'ಕರ್ನಾಟಕ ನಾಮಕರಣ ಮಹೋತ್ಸವ' ಸಮಾರಂಭದಲ್ಲಿ ಮೈಸೂರಿನ ಡಿ. ದೇವರಾಜ ಅರಸರು ಮುಖ್ಯಮಂತ್ರಿಯಾಗಿ ಬಂದಿದ್ದರು. ಇಂದು 'ಕರ್ನಾಟಕ ಸಂಭ್ರಮ-50'ರ ಸಂದರ್ಭದಲ್ಲಿ ನಾನೂ ಕೂಡ ಅದೇ ಜಿಲ್ಲೆಯವನು ಮುಖ್ಯಮಂತ್ರಿಯಾಗಿ, ಇಲ್ಲಿಗೆ ಬಂದಿದ್ದೇನೆ. ಅಂದಿನ ಕಾರ್ಯಕ್ರಮದಲ್ಲಿ ಸಚಿವರಾಗಿದ್ದ ಕೆ.ಎಚ್. ಪಾಟೀಲ ಅವರು ಅಧ್ಯಕ್ಷತೆ ವಹಿಸಿದ್ದರು. ಇಂದು ಅವರ ಮಗ, ನಮ್ಮ ಸರ್ಕಾರದಲ್ಲಿ ಸಚಿವರಾಗಿರುವ ಎಚ್.ಕೆ. ಪಾಟೀಲ ಅವರು ಕೂಡ ಈ ಐತಿಹಾಸಿಕ ಕಾರ್ಯಕ್ರಮವನ್ನು ಏರ್ಪಡಿಸಿ ಅಧ್ಯಕ್ಷತೆ ವಹಿಸಿದ್ದಾರೆ. ಇದು ಕಾಕತಾಳೀಯ ಹಾಗೂ ಚಾರಿತ್ರಿಕವಾದಂತಹ ಕಾರ್ಯಕ್ರಮವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಣ್ಣಿಸಿದರು.

> ಕರ್ನಾಟಕ ಏಕೀಕರಣಕ್ಕೆ ಹಲವರು ಹೋರಾಟ, ತ್ಯಾಗ, ಬಲಿದಾನವಾಗಿದೆ. ಮೈಸೂರು ರಾಜ್ಯವು 'ಕರ್ನಾಟಕ' ಎಂದು ನಾಮಕರಣಗೊಂಡು 50 ನೇ ವರ್ಷಾಚರಣೆ ಸಂಭ್ರಮದಲ್ಲಿದೆ. ಇಂಥ ವೇಳೆ ಕೆಲವರು ಉತ್ತರ ಕರ್ನಾಟಕ ಪ್ರತ್ಯೇಕವಾಗಲಿ ಎಂಬ ಹೇಳಿಕೆ ಸರಿಯಲ್ಲ. ಅಖಂಡ ಕರ್ನಾಟಕವಾಗಿಯೇ ಉಳಿಯಬೇಕು.
>
> -ಬಸವರಾಜ ಹೊರಟ್ಟಿ, ಸಭಾಪತಿ, ಪರಿಷತ್

> ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟವಾಗಿ ಉಳಿಯಲು ಶ್ರಮಿಸೋಣ. ಜತೆಗೆ ಕರ್ನಾಟಕದ 50 ವರ್ಷದ ಇತಿಹಾಸವನ್ನು ಮುಂದಿನ ಪೀಳಿಗೆಗೂ ತಿಳಿಸುವ ಕೆಲಸ ಈ ಕಾರ್ಯಕ್ರಮದಿಂದಾಗಿದೆ.
>
> -ಯು.ಟಿ. ಖಾದರ್, ಸಭಾಧ್ಯಕ್ಷ, ವಿಧಾನಸಭೆ

■ ಇನ್ನೂ ಕನ್ನಡಮಯವಾಗದ ನಾಡು, ಸಿಎಂ ಆಕ್ರೋಶ ■

# ಕನ್ನಡಿಗರೇ ಮೈಕೊಡವಿ ಎದ್ದೇಳಿ



ಗದಗದಲ್ಲಿ ಶುಕ್ರವಾರ ಏರ್ಪಡಿಸಲಾಗಿದ್ದ ಕರ್ನಾಟಕ ಸಂಭ್ರಮ–50 ಸಮಾರಂಭವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನ ಸಭಾಧ್ಯಕ್ಷ ಯು.ಟಿ ಖಾದರ್, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಎಚ್.ಕೆ. ಪಾಟೀಲ, ಶಿವರಾಜ ತಂಗಡಗಿ ಮತ್ತಿತರ ಸಚಿವರು, ಶಾಸಕರು ಉಪಸ್ಥಿತರಿದ್ದರು.

**ಗದಗ:** ನಮ್ಮ ನಿರಭಿಮಾನವೇ ಕರುನಾಡು ಕನ್ನಡಮಯ ಆಗದಿರುವದಕ್ಕೆ ಪ್ರಮುಖ ಕಾರಣವಾಗಿದ್ದು ಇದು ಅತ್ಯಂತ ನೋವಿನ ಸಂಗತಿ. ಇನ್ನಾದರೂ ಕನ್ನಡಿಗರು ಎಚ್ಚೆತ್ತುಕೊಳ್ಳಬೇಕು. ರಾಜ್ಯಕ್ಕೆ ಬರುವ ಅನ್ಯರಿಗೆ ಮೊದಲು ಕನ್ನಡ ಕಲಿ. ಕನ್ನಡದಲ್ಲೇ ಮಾತನಾಡು. ಇಲ್ಲದಿದ್ದರೆ ನಿನ್ನೊಂದಿಗೆ ಮಾತನಾಡಲ್ಲ ಎಂದು ಗಟ್ಟಿಯಾಗಿ ಹೇಳುವ ಧೈರ್ಯವನ್ನು ತೋರಬೇಕು. ಇನ್ನು ಮುಂದೆ ಪರಭಾಷಿಕರೊಂದಿಗೂ ಕನ್ನಡದಲ್ಲೇ ವ್ಯವಹರಿಸುತ್ತೇವೆ ಎಂಬ ಪ್ರತಿಜ್ಞೆಯನ್ನೂ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಕಳಕಳಿಯ ಕರೆ ನೀಡುವ ಮೂಲಕ ನಿರಭಿಮಾನಿಗಳಿಗೆ ಸಾತ್ವಿಕ ಛಡಿ ಏಟು ನೀಡಿದರು.

ಐತಿಹಾಸಿಕ ಗದಗ ನಗರದಲ್ಲಿ 'ರಾಜ್ಯಕ್ಕೆ ಕರ್ನಾಟಕ ನಾಮಕರಣದ ಸುವರ್ಣ ಮಹೋತ್ಸವ ವರ್ಷಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ತಮ್ಮ ಮನದಾಳವನ್ನು ಹಂಚಿಕೊಂಡ ಮುಖ್ಯಮಂತ್ರಿಗಳು, ಮಾತಿನುದ್ದಕ್ಕೂ ಕನ್ನಡತನವನ್ನು, ಕನ್ನಡಿಗರಾದ ನಾವು ಇದುವರೆಗೆ ಏಕೆ ಅಳವಡಿಸಿಕೊಳ್ಳುವಲ್ಲಿ ವಿಫಲರಾದೆವು ಎನ್ನುವ ಸ್ವವಿಮರ್ಶೆಗೆ ಒತ್ತು ಕೊಟ್ಟರು. ಏಕೀಕರಣವಾಗಿ ಆರೂವರೆ ದಶಕ ಹಾಗೂ ಕರ್ನಾಟಕ ನಾಮಕರಣವಾಗಿ ಐವತ್ತು ವರ್ಷಗಳು ಉರುಳಿದ್ದರೂ ನಮ್ಮ ನಾಡು ನಿರೀಕ್ಷಿತ ಮಟ್ಟದಲ್ಲಿ ಕನ್ನಡಮಯವಾಗಿಲ್ಲ ಎಂಬುದು ನೋವಿನ ಸಂಗತಿ ಎಂದರು.

### ಭವ್ಯ ಮೆಟ್ಟಿಲ ಮೇಲೆ ಸಮಾರೋಪ ಸಮಾರಂಭ

ಹಂಪೆ ಮತ್ತು ಗದುಗಿನಿಂದ ಆರಂಭವಾಗಿರುವ ಮರುನಾಮಕರಣ ಸುವರ್ಣ ಮಹೋತ್ಸವ ಕಾರ್ಯಕ್ರಮಗಳು ವರ್ಷವಿಡೀ ರಾಜ್ಯದೆಲ್ಲೆಡೆ ನಡೆಯಲಿವೆ. 2024ರ ಅಕ್ಟೋಬರ್ 30ರಂದು ಬೆಂಗಳೂರು ವಿಧಾನಸೌಧದ ಮುಂಭಾಗದ ಭವ್ಯ ಮೆಟ್ಟಿಲುಗಳ (ಗ್ರ್ಯಾಂಡ್ ಸ್ಟೆಪ್ಸ್) ಎದಿರು ಸಮಾರೋಪ ಸಮಾರಂಭ ಏರ್ಪಾಡಾಗಲಿದೆ ಎಂದು ಅತಿಥಿಯಾಗಿದ್ದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದರು.

> “ ಕರ್ನಾಟಕ ರಾಜ್ಯದಲ್ಲಿ ಕನ್ನಡ ಕಾವಲು ಸಮಿತಿಯನ್ನು 1983ರಲ್ಲಿ ರಚಿಸಲಾಗಿತ್ತು. ಅದಕ್ಕೆ ನಾನು ಮೊದಲ ಅಧ್ಯಕ್ಷನಾಗಿದ್ದೆ ಎಂಬುದನ್ನು ನೆನಪು ಮಾಡಿಕೊಂಡರೆ ಎಂತಹ ವಿಪರ್ಯಾಸ ಎನಿಸುತ್ತದೆ. ನಮ್ಮ ನೆಲದಲ್ಲಿ ನಮ್ಮದೇ ಭಾಷೆ ಕಾಯಲು ಒಂದು ಸಮಿತಿ ರಚಿಸುವ ಅನಿವಾರ್ಯತೆ ಬಂದದ್ದು ಏನನ್ನು ಸೂಚಿಸುತ್ತದೆ?
>
> ▪ ಸಿದ್ದರಾಮಯ್ಯ, ಮುಖ್ಯಮಂತ್ರಿ

ಕಾರ್ಯಕ್ರಮದಲ್ಲಿ ಸಭಾಧ್ಯಕ್ಷ ಯು.ಟಿ.ಖಾದರ್, ಸಭಾಪತಿ ಬಸವರಾಜ ಹೊರಟ್ಟಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಜ್ಯ ಸಚಿವ ಸಂಪುಟದ ಇಪ್ಪತ್ತು ಸಚಿವರು, ಗದಗ ಜಿಲ್ಲೆಯ ಹಾಲಿ–ಮಾಜಿ ಜನಪ್ರತಿನಿಧಿಗಳು ಹಾಗೂ ಅಪಾರ ಗಣ್ಯರು ಭಾಗವಹಿಸಿದ್ದರು.

ಕಾರ್ಯಕ್ರಮದ ರೂವಾರಿ ಹಾಗೂ ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ ಅಧ್ಯಕ್ಷತೆ ವಹಿಸಿ, ಮರು ನಾಮಕರಣದ ಸುವರ್ಣ ಸಂಭ್ರಮವನ್ನು ಗದಗಿನಲ್ಲಿ ಆಚರಿಸುತ್ತಿರುವುದರ ಔಚಿತ್ಯವನ್ನು ವಿವರಿಸಿದರು. ಮ್ಯಾಗ್ಸೆಸ್ಸೆ ಪುರಸ್ಕೃತ ರಾಜೇಂದ್ರ ಸಿಂಗ್ ಗೌರವ ಅತಿಥಿಯಾಗಿದ್ದರು.



ಮೆರವಣಿಯುದ್ದಕ್ಕೂ ಸೇರಿದ್ದ ಜನತೆಗೆ ಕೈ ಬಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ.

# ಉತ್ತರ ಕರ್ನಾಟಕ ಪ್ರತ್ಯೇಕ ಎಂದು ಕಲ್ಪಿಸಿಕೊಳ್ಳುವುದೇ ತಪ್ಪು

## ಕರ್ನಾಟಕ ಸಂಭ್ರಮ 50 ಕಾರ್ಯಕ್ರಮದಲ್ಲಿ ವಿಪ ಸಭಾಪತಿ ಹೊರಟ್ಟಿ

• **ಕನ್ನಡಪ್ರಭ ವಾರ್ತೆ** ಗದಗ

ಉತ್ತರ ಕರ್ನಾಟಕ ಪ್ರತ್ಯೇಕ ಎನ್ನುವ ಕಲ್ಪನೆ ಯಾರ ತಲೆಯಲ್ಲೂ ಮೂಡಬಾರದು, ಅದರ ಕುರಿತು ಮಾತನಾಡಬಾರದು. ಅದೆಲ್ಲಕ್ಕಿಂತಲೂ ಅದನ್ನು



ಕಲ್ಪನೆ ಮಾಡಿಕೊಳ್ಳುವುದೇ ದೊಡ್ಡ ತಪ್ಪು ಎನ್ನುವುದು ನನ್ನ ಅಭಿಪ್ರಾಯ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಶುಕ್ರವಾರ ಇಲ್ಲಿನ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಕರ್ನಾಟಕ ಸಂಭ್ರಮ 50 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಖಂಡ ಕರ್ನಾಟಕ ಕಟ್ಟುವಲ್ಲಿ ನಮ್ಮ ಅನೇಕ ಹಿರಿಯರು ಹಗಲಿರುಳು ಶ್ರಮಿಸಿದ್ದಾರೆ ಎಂದರು.

ಕೆಲವರು ತಮ್ಮ ಆಸ್ತಿ, ಹಣ ಅಮೂಲ್ಯ ಸಮಯವನ್ನು ತ್ಯಾಗ ಮಾಡಿದ್ದಾರೆ. ನಾವೆಲ್ಲಾ ಒಂದಾಗಿದ್ದಾಗಲೇ ಚೆಂದ, ಅಖಂಡ ಕರ್ನಾಟಕವಾಗಿದ್ದು ದೇಶದಲ್ಲಿಯೇ ನಮ್ಮ ರಾಜ್ಯವನ್ನು ಮಾದರಿ ರಾಜ್ಯವನ್ನಾಗಿ ಮಾಡಲು ಪ್ರತಿಯೊಬ್ಬರೂ ಶ್ರಮಿಸಬೇಕು. ಅದು ಕೇವಲ ರಾಜಕಾರಣಿಗಳಿಂದ ಮಾತ್ರ ಸಾಧ್ಯವಿಲ್ಲ, ಸಮಾಜದ ಎಲ್ಲಾ ಸ್ತರದ ಜನರು ನಾಡುಕಟ್ಟುವಲ್ಲಿ ಶ್ರಮಿಸಬೇಕು ಎಂದರು.

ಏಕೀಕರಣವನ್ನು ಕಂಡು 50 ವರ್ಷಗಳನ್ನು ಪೂರ್ಣಗೊಳಿಸಿರುವ ಈ ಸಂದರ್ಭದಲ್ಲಿ ನಾವು ನೀವೆಲ್ಲರೂ ಸಂಕಲ್ಪ ಮಾಡೋಣ ಎಂದು ಕಾರ್ಯಕ್ರಮದ ಮೂಲ ಉದ್ದೇಶವನ್ನು ಹೊರಟ್ಟಿ ನೆರೆದಿದ್ದ ಪ್ರಮುಖರಿಗೆ ತಿಳಿಸುವುದರೊಟ್ಟಿಗೆ ಆಗಾಗ ಪ್ರತ್ಯೇಕ ಉತ್ತರ ಕರ್ನಾಟಕ ಎನ್ನುವವರಿಗೆ ತಕ್ಕ ಉತ್ತರ ನೀಡಿದರು.



ವಿವಿಧ ಕಲಾತಂಡಗಳ ಪ್ರದರ್ಶನ.

■ ಕರ್ನಾಟಕ ಸಂಭ್ರಮ–50ರ ಸಂಭ್ರಮವನ್ನು ಅಚ್ಚಳಿಯದ ಹಾಗೆ ನೆನಪಿನಲ್ಲಿಟ್ಟು ಕೊಳ್ಳಲು ಜಿಲ್ಲಾಡಳಿತ ನಗರದ ಪಂ.ಪುಟ್ಟರಾಜ ಗವಾಯಿಗಳ ವೃತ್ತದಲ್ಲಿ ನಿರ್ಮಿಸಿದ 31ಅಡಿ ಎತ್ತರದ ಸ್ತೂಪವನ್ನು ಸಿಎಂ ಸಿದ್ದರಾಮಯ್ಯ ಅವರು ಅನಾವರಣಗೊಳಿಸಿದರು

ಪುಷ್ಪಾರ್ಚನೆ ಮಾಡುವ ಮೂಲಕ ನಗರಕ್ಕೆ ಭವ್ಯವಾಗಿ ಸ್ವಾಗತಿಸಿದರು.

**ಅದ್ದೂರಿ ಮೆರವಣಿಗೆ:** ಮೈಸೂರಿನ ಚಂಡೆ ಮದ್ದಳೆ ಕಲಾ ಸೇರಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ 25ಕ್ಕೂ ಹೆಚ್ಚು ಕಲಾತಂಡಗಳ, ಮಹಿಳೆಯರ ಪೂರ್ಣಕುಂಭದೊಂದಿಗೆ ಮೆರವಣಿಗೆ ಅದ್ದೂರಿಯಾಗಿ ಜರುಗಿತು. ಮೆರವಣಿಯುದ್ದಕ್ಕೂ ಕನ್ನಡದ ಬಾವುಟ ಹಿಡಿದು, ಕೆಂಪು-ಹಳದಿ ಶಾಲು ಹಾಕಿಕೊಂಡ ಕನ್ನಡದಭಿಮಾನಿಗಳು ಜಯಘೋಷಣೆಗಳನ್ನ ಕೂಗುತ್ತಾ ಮೆರವಣಿಗೆಯಲ್ಲಿ ಸಾಗಿದ್ದು, ವಿಶೇಷವಾಗಿತ್ತು. ಕನ್ನಡ ರಥಕ್ಕೆ ವಿಶೇಷವಾಗಿ ಅಲಂಕಾರಗೊಳಿಸಿದ್ದು ನೋಡುಗರ ಗಮನ ಸೆಳೆಯಿತು. ಕನ್ನಡ ರಥಕ್ಕೆ ಕನ್ನಡಾಭಿಮಾನಿಗಳು ಪುಷ್ಪಾರ್ಚನೆಗೈದರು.

1973ರ ನ.3ರಂದು ನಡೆದ ಕರ್ನಾಟಕ ನಾಮಕರಣ ಸಂಭ್ರಮದ ಕಾರ್ಯಕ್ರಮವನ್ನು ಮತ್ತೇ ಮರುಸೃಷ್ಟಿಸುವ ಮೂಲಕ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಯಿತು. 50 ವರ್ಷದ ಹಿಂದೆ ಸಾಗಿದ ಮಾರ್ಗದಲ್ಲಿಯೇ ಮೆರವಣಿಗೆಯೂ ವೀರನಾರಾಯಣ ದೇವಸ್ಥಾನದಿಂದ ಆರಂಭವಾಗಿ ಜಾಮಿಯಾ ಮಸೀದಿ, ಬಸವೇಶ್ವರ ವೃತ, ಕೆ.ಎಚ್. ಪಾಟೀಲ ವೃತ್ತ, ಭೂಮ ರೆಡ್ಡಿ ಸರ್ಕಲ್, ಜನರಲ್ ಕಾರ್ಯಪ್ಪ ಸರ್ಕಲ್ ಮಾರ್ಗವಾಗಿ ನಗರದ ಕಾಟನ್ ಸೇಲ್ ಸೊಸೈಟಿ ಆವರಣ ತಲುಪಿತು.

ವಿವಿಧ ಕಲಾತಂಡಗಳ ಪ್ರದರ್ಶನ ನೋಡುಗರ ಗಮನ ಸೆಳೆಯಿತು. ಮೈಸೂರು ದಸರಾದಲ್ಲಿ ಪ್ರದರ್ಶನಗೊಂಡ ಸಬರಮತಿ ಆಶ್ರಮ, ಲಕ್ಕುಂಡಿಯ ಬ್ರಹ್ಮಜೀನಾಲಯ ಸ್ತಬ್ದ ಚಿತ್ರಗಳು ಮೆರವಣಿಗೆಯ ಮೆರುಗು ಹೆಚ್ಚಿಸಿದವು. ನಾಡದೇವತೆ ತಾಯಿ ಭುವನೇಶ್ವರಿ ರಥ, ಮಹಿಳೆಯರ ಪೂರ್ಣಕುಂಭ ಮೇಳ, ವಿವಿಧ ಕಲಾತಂಡಗಳ ಪ್ರದರ್ಶನ, ವಿವಿಧ ಶಾಲಾ-ಕಾಲೇಜು ವಿದ್ಯಾರ್ಥಿಗಳಿಂದ ನಡೆದ ಕವಾಯಿತ ಮೆರವಣಿಗೆಯ ಗತವೈಭವ ಸಾರಿದವು.

# ಕರ್ನಾಟಕ-50 ಗದಗ... ನೆನಪುಗಳ ಮೆರವಣಿಗೆ!

■ ಜಿ. ಅರವಿಂದ

**ಗದಗ:** ಗದುಗಿನಲ್ಲಿ ನಡೆದ ರಾಜ್ಯ ಮರುನಾಮಕರಣದ ಐವತ್ತನೇ ವರ್ಷಾಚರಣೆ ಸಮಸ್ತ ಕನ್ನಡಿಗರೆಲ್ಲರ 'ಕರ್ನಾಟಕ ಸಂಭ್ರಮ'ವಾಗಿತ್ತು. ಅಕ್ಷರಶಃ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಿತ್ತು. ಕನ್ನಡಿಗರೆಲ್ಲರ ಮನಸ್ಸು ಬೆಸೆಯುವ ಭಾವನಾತ್ಮಕ ಹಬ್ಬವಾಗಿತ್ತು.





ನಗರದಲ್ಲಿ ಶುಕ್ರವಾರ ನಡೆದ ಕರ್ನಾಟಕ ರಾಜ್ಯ ನಾಮಕರಣದ ಸುವರ್ಣ ಮಹೋತ್ಸವದ ಒಟ್ಟಾರೆ ಕಾರ್ಯಕ್ರಮಗಳು ಕೇವಲ ಸಾಂಕೇತಿಕವಾಗಿರಲಿಲ್ಲ. ಕನ್ನಡಿಗರ ಅಸ್ಮಿತೆಯ ಛಾಪು ಒತ್ತುವಂಥವಾಗಿದ್ದವು.

ನಾಡಿನ ನಾಮಕರಣಕ್ಕೆ ಬಹುದೊಡ್ಡ, ವಿಶಿಷ್ಟ ಇತಿಹಾಸ ಇರುವುದನ್ನು ಸ್ಮರಣೆಯ ಮುನ್ನೆಲೆಗೆ ತಂದವು. 'ಕರ್ನಾಟಕ'ವೆನ್ನಿ ಎಂಬ ಕನ್ನಡ ಹೋರಾಟಗಾರರು, ಧುರೀಣರು, ಸಾಹಿತಿ- ಕಲಾವಿದರ ಒಕ್ಕೊರಲ ಧ್ವನಿ ಐವತ್ತು- ಆರವತ್ತರ ದಶಕದಲ್ಲೇ ಮುಗಿಲು ಮುಟ್ಟಿತ್ತಷ್ಟೇ.

ಕೆ.ಜಿ.ಕುಂದಣಗಾರ ಅಧ್ಯಕ್ಷತೆಯಲ್ಲಿ ಗದುಗಿನ 43ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ (1961), 'ಮೈಸೂರು ಬದಲಿಸಿ, ಕರ್ನಾಟಕ ಎಂಬ ಹೆಸರಿಡಿ' ಎಂಬ ನಿರ್ಣಯ ಅಂಗೀಕರಿಸಿದ್ದು... ಇದಕ್ಕೆ ಆಗಿನ ಅತಿ ಪ್ರಭಾವಿ ನಾಯಕ, ಸಮ್ಮೇಳನ ಸ್ವಾಗತ ಸಮಿತಿಯ ಅಧ್ಯಕ್ಷ ಕೆ.ಎಚ್.ಪಾಟೀಲ ಸಹಿ ಹಾಕಿದ್ದಷ್ಟೇ ಅಲ್ಲ, ಆ ನಂತರದ ದಿನಗಳಲ್ಲಿ ಕರ್ನಾಟಕದ ಪ್ರತಿಪಾದನೆಯನ್ನು ತೀವ್ರಗೊಳಿಸಿದ್ದು... 1971ರ ಬೆಳಗಾವಿ ಕಾಂಗ್ರೆಸ್ ಸಮಾವೇಶದಲ್ಲಿ ಕರ್ನಾಟಕದ ಹೆಸರೇ ಕನ್ನಡಿಗರ ಅಸ್ಮಿತೆ ಎಂಬುದನ್ನು ಬಲವಾಗಿ ಹೇಳಿ, ಪ್ರತಿಯೊಬ್ಬರಿಗೂ ಮನದಟ್ಟು ಮಾಡಿಸಿದ್ದು... 1972ರ ವಿಧಾನಸಭಾ ಚುನಾವಣೆ ಪ್ರಣಾಳಿಕೆಯಲ್ಲಿ 'ಕರ್ನಾಟಕ' ಎಂಬ ನಾಮಕರಣ ಮಾಡುವುದಾಗಿ ಲಿಖಿತ ವಾಗ್ದಾನ ನೀಡಿಸಿದ್ದು... ಇದಾದ ನಂತರ ಅರಸು ಸರ್ಕಾರದಲ್ಲಿ ಪ್ರಮುಖ ಸಚಿವರಾಗಿ ಈ ಭಾವನಾತ್ಮಕ ಅಂಶ ಜಾರಿಯಾಗುವಂತೆ ನೋಡಿಕೊಂಡದ್ದು... ದೇವರಾಜ ಅರಸು ಸರ್ಕಾರ ಒಮ್ಮನಸ್ಸಿನಿಂದ ಆಡಳಿತಾತ್ಮಕ ಮುದ್ರೆ ಒತ್ತಿದ್ದು... ಇವೆಲ್ಲ ಇಂದಿನ ತಲೆಮಾರು ಬಹುತೇಕ ಅರಿಯದಿರುವ, ಹಿರಿ ತಲೆಮಾರಿನ ಅನೇಕರು ಮರೆತಂತಿರುವ ಇತಿಹಾಸದ ಪುಟಗಳು.

ಹಾಗೆಯೇ ಮೈಸೂರಿನ ಮೊದಲ ರಾಜ್ಯಪಾಲ, ರಾಜಮನೆತನದ ಜಯಚಾಮರಾಜ ಒಡೆಯರ್ ಔದಾರ್ಯದ ಬಗ್ಗೆಯೂ ಬಹುತೇಕರು ಅಷ್ಟಾಗಿ ನೆನಪಿಟ್ಟುಕೊಂಡಿಲ್ಲ.

ಇದು ರಾಜಕೀಯ ತೀರ್ಮಾನವಲ್ಲ, ನಾಡಿನ ಜನಸತ್ತೆಯ ತೀರ್ಮಾನ ಎಂಬುದನ್ನು ಈ ಅರಸ ಪ್ರಾಂಜಲ ಮನದಿಂದ ಒಪ್ಪಿಕೊಂಡರು.

ನಾಮಕರಣವಾಗುವಾಗ ಅವರು ಮಾಜಿ ರಾಜ್ಯಪಾಲರಾಗಿದ್ದರು. ಸರ್ಕಾರದ ಆಮಂತ್ರಣ ಒಪ್ಪಿ, ಬೆಂಗಳೂರು, ಹಂಪಿ ಮತ್ತು ಗದುಗಿನಲ್ಲಿ ನಡೆದ ನಾಮಕರಣ ಉತ್ಸವಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ದೊಡ್ಡತನ ಮೆರೆದರು. ಇದಿಷ್ಟೇ ಅಲ್ಲ, ಗದುಗಿನ ವೀರ ನಾರಾಯಣ ದೇವಾಲಯದಿಂದ ಅಧಿಕೃತ ಸಮಾರಂಭ ನಡೆಯಲಿದ್ದ ಕಾಟನ್ ಸೇಲ್ ಸೊಸೈಟಿ ತನಕ ಮಹಾರಾಜರು ಶ್ರೀಸಾಮಾನ್ಯರಂತೆ ಮೆರವಣಿಗೆಯಲ್ಲಿ ನಡೆದುಕೊಂಡು ಬಂದಿದ್ದರು.

ಮುಖ್ಯಮಂತ್ರಿಯಾಗಿ ವಿಧಾನಸಭೆಯಲ್ಲಿ 'ಕರ್ನಾಟಕ' ನಾಮಕರಣ ನಿರ್ಣಯ ಮಂಡಿಸಿದ ದೇವರಾಜ ಅರಸು, ಕರ್ನಾಟಕವೇ ರಾಜ್ಯದ ಹೆಸರಾಗಲಿ ಎಂಬ ಧ್ವನಿಯನ್ನು ಆಡಳಿತಾರೂಢ ರಾಜಕಾರಣಿಯಾಗಿ ಮೊಳಗಿಸಿದ ಕೆ.ಎಚ್.ಪಾಟೀಲ ಮತ್ತು ಔದಾರ್ಯ ಮೆರೆದ ಜಯಚಾಮರಾಜರ ನೆನಪುಗಳ ಮೆರವಣಿಗೆ ಶುಕ್ರವಾರ ಮತ್ತೊಮ್ಮೆ ನಡೆಯಿತು. ಈ ನೆನಪುಗಳನ್ನು ಹೊರತುಪಡಿಸಿ ಇಂದಿನ ಕನ್ನಡ ಜ್ಯೋತಿಯ ಮೆರವಣಿಗೆಯನ್ನು ಊಹಿಸಿಕೊಳ್ಳಲೂ ಆಗುವುದಿಲ್ಲ ಬಿಡಿ ! ಏಕೆಂದರೆ ಇದು ಸವಿನೆನಪುಗಳು ತಾನೇ ?

ನಾಮಕರಣ ಉತ್ಸವ ನಡೆದ ಮೂರು ಸ್ಥಳಗಳ ಪೈಕಿ ಗದುಗಿಗೇ ಆದ್ಯ ಸ್ಥಾನ. ಬೆಂಗಳೂರಿನದ್ದು ರಾಜಧಾನಿಯ ಸಮಾರಂಭ. ಹಂಪಿಯದ್ದು ವಿಜಯನಗರ ವೀರಪುತ್ರರಾದ ಕನ್ನಡ ಸಾಮ್ರಾಟರಿಗೆ ಗೌರವ ಸಲ್ಲಿಸಿ ಕನ್ನಡ ಜ್ಯೋತಿ ಬೆಳಗಿಸಿದ ಕಾರ್ಯಕ್ರಮ. ಗದುಗಿನದ್ದು ಇಡೀ ಕನ್ನಡತನದ ಭಾವನಾತ್ಮಕತೆಗೆ ಶಿರಬಾಗಿ ಮಣಿದ ಉತ್ಸವ.

ಆಗಲೂ ಹಂಪಿಯಿಂದ ಬಂದಿದ್ದ ಕರುನಾಡ ಜ್ಯೋತಿಯನ್ನು ವೀರ ನಾರಾಯಣ ಗುಡಿಯಲ್ಲಿಯೇ ಸ್ವೀಕರಿಸಿ ಮೆರವಣಿಗೆಯಲ್ಲಿ ಕರೆತಂದು ಕಾಟನ್ ಸೇಲ್ ಸೊಸೈಟಿಯಲ್ಲಿ ಸರ್ಕಾರ ಕಾರ್ಯಕ್ರಮ ನಡೆಸಿತ್ತು. ಐವತ್ತು ವರ್ಷಗಳ ನಂತರವೂ ಇದೇ ಸ್ಥಳದಲ್ಲಿ ಜ್ಯೋತಿ ಸ್ವೀಕರಿಸಿ, ಅದೇ ಕಾಟನ್ ಸೇಲ್ ಸೊಸೈಟಿಯಲ್ಲೇ ಅಧಿಕೃತ ಸಮಾರಂಭ ನಡೆಸಿತು. ಕರ್ನಾಟಕ ನಾಮಕರಣದ ನೆನಪಿಗೆ ರಾಜ್ಯದೆಲ್ಲೆಡೆ ವರ್ಷಪೂರ್ತಿ ಸಂಚರಿಸಲಿರುವ ಕನ್ನಡ ರಥ ಮತ್ತು ಜ್ಯೋತಿಗೆ ಇವೆಲ್ಲ ಮಧುರ ನೆನಪುಗಳ ಪಲ್ಲಕ್ಕಿಯೂ ಜೊತೆಗೂಡಲಿದೆ.

## ಇಬ್ಬರು ನಾಯಕರಿಗೆ ಮಧುರ ಕ್ಷಣ

ನಾಮಕರಣ ಸುವರ್ಣ ಮಹೋತ್ಸವ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಎಚ್.ಕೆ.ಪಾಟೀಲ ಮತ್ತು ಮಾಜಿ ಶಾಸಕ ಡಿ.ಆರ್.ಪಾಟೀಲ ಮಟ್ಟಿಗೆ ತುಂಬ ವಿಶಿಷ್ಟ. ಜೊತೆಗೆ ಚಿರಸ್ಮರಣೀಯ ಎನ್ನಬಹುದು.

ಎಚ್.ಕೆ.ಪಾಟೀಲರು ತಮ್ಮ ತಂದೆ ಮತ್ತು ಡಿ.ಆರ್.ಪಾಟೀಲರು ತಮ್ಮ ಚಿಕ್ಕಪ್ಪ ಕೆ.ಎಚ್.ಪಾಟೀಲ 'ಕರ್ನಾಟಕ'ದ ಹೆಸರಿಗಾಗಿ ಹೋರಾಡಿದ್ದನ್ನು ಯುವಕರಾಗಿ ಅತೀ ಸಮೀಪದಿಂದ ಗಮನಿಸಿದ್ದವರು. ಕೆ.ಎಚ್.ಪಾಟೀಲರಂತೆಯೇ ಇವರೂ ಈಗ ರಾಜಕೀಯ ನಾಯಕರು. ಮೊದಲ ಕನ್ನಡ ಜ್ಯೋತಿಯನ್ನು ತಂದೆ ಸ್ವೀಕಾರ ಮಾಡಿ ಮೆರವಣಿಗೆ ಮಾಡಿದ ನೆಲದಲ್ಲಿ ಪುತ್ರರಾದ ತಾವೂ ಸ್ವೀಕರಿಸಿದ್ದು... ತಂದೆಯಂತೆಯೇ ತಾವೂ ಸಚಿವರಾಗಿರುವುದು ಎಚ್.ಕೆ.ಪಾಟೀಲರಿಗೆ ಸಹಜವಾಗಿ ಖುಷಿ ನೀಡಿದ ಸಂಗತಿ. ಅದೇ ರೀತಿ 1973ರ ಮೊದಲ ನಾಮಕರಣೋತ್ಸವದಲ್ಲಿ ಡಿ.ಆರ್.ಪಾಟೀಲರು ಸ್ಮರಣಿಕೆ ಬಿಡುಗಡೆ ಮಾಡಿದ್ದರು. ಇಬ್ಬರೂ ಐವತ್ತು ವರ್ಷದ ಸಮಾರಂಭದಲ್ಲಿ ಭಾಗಿಯಾಗಿರುವುದು ರಾಜ್ಯದ ಮಟ್ಟಿಗೂ ವಿಶಿಷ್ಟ ಘಟನೆ.

CMYK

# ಕನ್ನಡ ರಥದ ಮೆರವಣಿಗೆಯಲ್ಲಿ ಹೂವಿನ ಸುರಿಮಳೆ

**ಗದಗ:** ‘ಕನ್ನಡ ಸಂಭ್ರಮ–50’ರ ಅದ್ದೂರಿ ಕಾರ್ಯಕ್ರಮಕ್ಕಾಗಿ ಗದುಗಿಗೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವೀರನಾರಾಯಣ ದೇವಸ್ಥಾನದಲ್ಲಿ ನಾರಾಯಣನ ದರ್ಶನ ಪಡೆದರು.

ಬಳಿಕ ಕನ್ನಡ ರಥದ ಮೆರವಣಿಗೆಯಲ್ಲಿ ಸಹಸ್ರ ಸಹಸ್ರ ‘ಅರಿಶಿನ–ಕುಂಕುಮ’ ಬಣ್ಣದ ಬಾವುಟಗಳು, ಕಲಶಗಳು ಮತ್ತು ಕನ್ನಡ ಶಾಲುಗಳನ್ನು ಹೊದ್ದ ಕನ್ನಡ ಕಾರ್ಯಕರ್ತರ ಜಯಘೋಷಗಳ ನಡುವೆ ಮೆರವಣಿಗೆಯಲ್ಲಿ ತೆರಳಿದರು.

ಗದಗಿನ ಮುಖ್ಯ ರಸ್ತೆಗಳಲ್ಲಿ ಸಾಗಿದ ಕನ್ನಡ ರಥವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಭಿಮಾನಿಗಳು, ಕಾರ್ಯಕರ್ತರು ಹೂಮಳೆಗರೆದು ಸ್ವಾಗತಿಸಿದರು.

ದಾರಿಯುದ್ದಕ್ಕೂ ಮನೆಗಳ ಮುಂದೆ ಕನ್ನಡದ ರಂಗೋಲಿ, ಬಾವುಟಗಳು ಕಣ್ಮನ ಸೆಳೆಯುತ್ತಿದ್ದರೆ ಮಹಿಳೆಯರು, ಮಕ್ಕಳು ರಥಕ್ಕೆ ಹೂಮಳೆಗರೆಯುತ್ತಾ, ರಥದ ಚಕ್ರಗಳಿಗೆ ಹಣ್ಣು ಕಾಯಿ, ಹಾಲಿನ ಅಭಿಷೇಕ ಮಾಡಿದರು.

ಡಿಸಿಎಂ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ್, ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್, ಮಂಕಾಳ ವೈದ್ಯ ಸೇರಿ ಹಲವು ಮುಖಂಡರು ಇದ್ದರು.



ಕನ್ನಡ ರಥಕ್ಕೆ ಹೂ ಮಳೆಗರೆದ ಕನ್ನಡಿಗರು | ಮನಸ್ಸು ಬೆಸೆಯುವ ಭಾವನಾತ್ಮಕ ಹಬ್ಬ

# ಕರ್ನಾಟಕ–50ರ ಭವ್ಯ ಮೆರವಣಿಗೆ



ತಾಯಿ ಭುವನೇಶ್ವರಿ ದೇವಿ ಭಾವಚಿತ್ರ ಮೆರವಣಿಗೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಭಾಧ್ಯಕ್ಷ ಯು.ಟಿ ಖಾದರ್, ಸಭಾಪತಿ ಬಸವರಾಜ ಹೊರಟ್ಟಿ, ಎಚ್.ಕೆ. ಪಾಟೀಲ ಮತ್ತಿತರರಿದ್ದರು.

**ಗದಗ:** ಕರ್ನಾಟಕ–50ರ ಸಂಭ್ರಮದ ನಿಮಿತ್ತ ಹಂಪಿಯಿಂದ ಆರಂಭಗೊಂಡ ಕನ್ನಡ ಜ್ಯೋತಿ ಯಾತ್ರೆಯನ್ನು ಗದಗ ನಗರದಲ್ಲಿ ಶುಕ್ರವಾರ ವೈಭವದಿಂದ ಬರಮಾಡಿಕೊಳ್ಳಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ನಗರದ ಶ್ರೀ ವೀರನಾರಾಯಣ ದೇವಸ್ಥಾನದಲ್ಲಿ ಕನ್ನಡ ಜ್ಯೋತಿ ಸ್ವೀಕರಿಸಿದ ನಂತರ ಸಚಿವರು ಹಾಗೂ ಗಣ್ಯರೊಂದಿಗೆ ಶ್ರೀ ವೀರನಾರಾಯಣನ ದರ್ಶನ ಪಡೆದುಕೊಂಡರು. ದೇವಸ್ಥಾನದಿಂದ ಆರಂಭಗೊಂಡ ಕನ್ನಡ ರಥದ ಮೆರವಣಿಗೆಯಲ್ಲಿ ಸಹಸ್ರಾರು 'ಅರಿಶಿನ–ಕುಂಕುಮ' ಬಣ್ಣದ ಬಾವುಟಗಳು, ಕಲಶಗಳು ಮತ್ತು ಕನ್ನಡ ಶಾಲುಗಳನ್ನು ಹೊದ್ದ ಕನ್ನಡ ಕಾರ್ಯಕರ್ತರು ಪಾಲ್ಗೊಂಡರು. ಗದಗಿನ ಮುಖ್ಯರಸ್ತೆಗಳಲ್ಲಿ ಸಾಗಿದ ಕನ್ನಡ ರಥಕ್ಕೆ ಕನ್ನಡಿಗರು ಹೂ ಮಳೆಗರೆದು ಸ್ವಾಗತಿಸಿದರು.

ಗದಗಿನಲ್ಲಿ ನಡೆದ ರಾಜ್ಯ ಮರುನಾಮಕರಣದ ಐವತ್ತನೇ ವರ್ಷಾಚರಣೆ ಸಮಸ್ತ ಕನ್ನಡಿಗರೆಲ್ಲರ 'ಕರ್ನಾಟಕ ಸಂಭ್ರಮ'ವಾಗಿತ್ತು. ಅಕ್ಷರಶಃ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಿತ್ತು. ಕನ್ನಡಿಗರೆಲ್ಲರ ಮನಸ್ಸು ಬೆಸೆಯುವ ಭಾವನಾತ್ಮಕ ಹಬ್ಬವಾಗಿತ್ತು. ಕಾರ್ಯಕ್ರಮಗಳು ಕೇವಲ ಸಾಂಕೇತಿಕವಾಗಿರಲಿಲ್ಲ. ಕನ್ನಡಿಗರ ಅಸ್ಮಿತೆಯ ಭಾವ ಒತ್ತುವಂಥವಾಗಿದ್ದವು.



ಗದಗಿನಲ್ಲಿ ಸಮಾರಂಭದ ಉದ್ಘಾಟನೆ ವೇಳೆ ಸಿಎಂ ಸಿದ್ದರಾಮಯ್ಯ ಅವರು 'ಸಂಯುಕ್ತ ಕರ್ನಾಟಕ' ಪತ್ರಿಕೆಯನ್ನು ಓದುತ್ತಿರುವುದು.

## ಅಂದು ಅರಸು... ಕೆಎಚ್ ಇಂದು ಸಿದ್ದರಾಮಯ್ಯ– ಎಚ್‌ಕೆ

ಅಂದು ಸಾಮಾಜಿಕ ಪರಿವರ್ತನೆಯ ಹರಿಕಾರರೆಂದೇ ಖ್ಯಾತಿಯಾಗಿದ್ದ ಮುಖ್ಯಮಂತ್ರಿ ದೇವರಾಜ ಅರಸು... ಸಹಕಾರಿ ಭೀಷ್ಮ ಎಂದೇ ಜನನಿತರಾಗಿದ್ದ ಆಗಿನ ಸಚಿವ ಕೆ.ಎಚ್.ಪಾಟೀಲ... ಇಂದು ಅರಸು ದಾರಿಯಲ್ಲೇ ಸಾಗಿರುವ ಹೆಗ್ಗಳಿಕೆ ಗಳಿಸಿದ ಸಿಎಂ ಸಿದ್ದರಾಮಯ್ಯ... ಕೆ.ಎಚ್.ಪಾಟೀಲರ ಪುತ್ರರಾದ ಸಚಿವ ಎಚ್.ಕೆ.ಪಾಟೀಲ... ಮರು ನಾಮಕರಣ ಮಾಡಿ ಮೊದಲ ಕಾರ್ಯಕ್ರಮ ಉದ್ಘಾಟಿಸಿದ್ದ ಅರಸು ಮತ್ತು ಸುವರ್ಣ ಸಂಭ್ರಮ ಉದ್ಘಾಟಿಸಿದ ಸಿದ್ದರಾಮಯ್ಯ ಇಬ್ಬರೂ ಮೈಸೂರಿನವರು... ಕೆಎಚ್ ಮತ್ತು ಎಚ್‌ಕೆ ಗದಗಿನವರು... ಸಮಾರಂಭ ನಡೆದ ಸ್ಥಳವೂ ಒಂದೇ...

## ಕೇಂದ್ರದಿಂದ ಅನುದಾನ ಕೊಡಿಸಲಿ

ರಾಜ್ಯದಲ್ಲಿ 25 ಬಿಜೆಪಿ ಸಂಸದರಿದ್ದಾರೆ. ಅವರು ಕೇಂದ್ರದ ಮೇಲೆ ಒತ್ತಡ ಹೇರಿ ಬರ ಪರಿಹಾರ ಕೊಡಿಸಲು ಪ್ರಯತ್ನಿಸಬೇಕು. ನಮ್ಮ ಸಚಿವರಾದ ಕೃಷ್ಣ ಭೈರೇಗೌಡ, ಚೆಲುವರಾಯಸ್ವಾಮಿ ಹಾಗೂ ಪ್ರಿಯಾಂಕ್ ಖರ್ಗೆ ಅವರು ಪ್ರಧಾನಿ ಹಾಗೂ ಕೇಂದ್ರ ಕೃಷಿ ಸಚಿವರ ಭೇಟಿಗೆ ಅವಕಾಶ ಕೇಳಿದರೆ ಭೇಟಿಯಾಗುತ್ತಿಲ್ಲ. ರಾಜ್ಯದ ಬಿಜೆಪಿ ಮುಖಂಡರಿಗೆ ಪ್ರಧಾನಿ ಹಾಗೂ ಸಚಿವರು ಭೇಟಿಯಾಗುತ್ತಾರೆ. ಆದರೆ ನಮ್ಮ ಸಚಿವರು ಹೋದರೆ ಭೇಟಿಯಾಗುವುದಿಲ್ಲ. ಭೇಟಿಗೆ ಅವಕಾಶ ಸಿಗದಂತಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರದ ನಡೆಗೆ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ರಾಜ್ಯದಲ್ಲಿ 236 ತಾಲೂಕುಗಳಲ್ಲಿ ಬರ ಉಂಟಾಗಿದೆ. ಶೇ.50ರಷ್ಟು ಬೆಳೆಹಾನಿಯಾಗಿದ್ದು, 33,000 ಕೋಟಿ ರೂ. ಬೆಳೆ ನಷ್ಟ ಉಂಟಾಗಿದೆ. ಇದಕ್ಕಾಗಿ ಕೇಂದ್ರದಿಂದ 17900 ಕೋಟಿ ರೂ. ಪರಿಹಾರ ಕೇಳಲಾಗಿದೆ. ಕೇಂದ್ರಕ್ಕೆ ಮನವಿ ಮಾಡಲಾಗಿದ್ದು ಕೇಂದ್ರ ಸರಕಾರ ಕೂಡಲೇ ಸ್ಪಂದಿಸಬೇಕು. ಕೇವಲ ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ದೇಶದ ಉತ್ತರ ಪ್ರದೇಶ, ಬಿಹಾರ, ಕೇರಳ, ಹಿಮಾಚಲಪ್ರದೇಶ ಸೇರಿದಂತೆ 6 ರಾಜ್ಯಗಳಲ್ಲಿ ಮಳೆ ಪ್ರಮಾಣ ಕಡಿಮೆಯಾಗಿದೆ ಎಂದರು.

> **ಜಾತಿಗಣತಿ ವರದಿ ಬಗ್ಗೆ ಯಾರಿಗೆ ಅಸಮಾಧಾನವಾಗಿದೆಯೋ ಗೊತ್ತಿಲ್ಲ. ಅದು ಸಾಮಾಜಿಕ ಹಾಗೂ ಆರ್ಥಿಕ ಸಮೀಕ್ಷೆಯಾಗಿದ್ದು, ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು.**
>
> ▪ ಸಿದ್ದರಾಮಯ್ಯ | ಸಿಎಂ

ಹುಯಿಲಗೋಳ ನಾರಾಯಣರ ರಾಯರು ಬರೆದ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಹಾಡು ಮೊದಲು ಸಾರ್ವಜನಿಕವಾಗಿ ದೊಡ್ಡ ಮಟ್ಟದಲ್ಲಿ ಹೆಸರಾಗಿದ್ದು 1921ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ. ಮಹಾತ್ಮ ಗಾಂಧಿ ಎದುರು ಈ ಹಾಡನ್ನು ಹಾಡಿದ್ದವರು, ನಂತರ ಪದ್ಮ ಪ್ರಶಸ್ತಿಯಿಂದ ಪುರಸ್ಕೃತರಾದ, ಆಗಿನ್ನೂ ಬಾಲಕಿಯಾಗಿದ್ದ ಡಾ.ಗಂಗೂಬಾಯಿ ಹಾನಗಲ್. ಶುಕ್ರವಾರದ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಇದೇ ಹಾಡನ್ನು ಹಾಡಿದವರು ಇನ್ನೋರ್ವ ಪದ್ಮ ಪ್ರಶಸ್ತಿ ಪುರಸ್ಕೃತ ಪಂಡಿತ್ ಎಂ.ವೆಂಕಟೇಶಕುಮಾರ.

## ಗದಗ ವೀರ ನಾರಾಯಣ ದೇವಾಲಯದಿಂದ ಮೆರವಣಿಗೆ ಸಿಎಂ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ, ಎಚ್ಕೆ ಪಾಟೀಲ, ಹಲವು ಗಣ್ಯರು ಭಾಗಿ

# ಸುವರ್ಣ ಸಂಭ್ರಮದಲ್ಲಿ ಕನ್ನಡ ರಥ, ಜ್ಯೋತಿ ಮೆರುಗು

**ಗದಗ:** ನಗರದಲ್ಲಿ ಶುಕ್ರವಾರ ನಡೆದ ರಾಜ್ಯ ಮರುನಾಮಕರಣದ ಸುವರ್ಣ ಮಹೋತ್ಸವ, 'ಕರ್ನಾಟಕ ಸಂಭ್ರಮ– 50', ಕನ್ನಡತನ ವಿಜೃಂಭಿಸಿದ ಅತ್ಯಂತ ಅರ್ಥಪೂರ್ಣ ಕಾರ್ಯಕ್ರಮವಾಗಿತ್ತು. ಇಲ್ಲಿನ ಕಾಟನ್ ಸೇಲ್ ಸೊಸೈಟಿಯ ಆವರಣದ ಕೆ.ಎಚ್.ಪಾಟೀಲ ವೇದಿಕೆ ಹಾಗೂ ದೇವರಾಜ ಅರಸು ಮಂಟಪದಲ್ಲಿ ನಡೆದ ಸಮಾರಂಭ ಚಾರಿತ್ರಿಕವಾಗಿತ್ತು.

ಐವತ್ತು ವರ್ಷಗಳ ಹಿಂದೆ ಮರು ನಾಮಕರಣ ಆಗುವಲ್ಲಿ ಗದುಗಿನ ಮೂಲಕ ಹೊರಹೊಮ್ಮಿದ ರಾಜಕೀಯ ಒತ್ತಡವೇ ಪ್ರಧಾನ ಪಾತ್ರ ವಹಿಸಿತ್ತು. ಆಗಿನ ಅರಣ್ಯ ಸಚಿವ ಕೆ.ಎಚ್.ಪಾಟೀಲ ಮರು ನಾಮಕರಣ ಅಭಿಯಾನಕ್ಕೆ ರಾಜಕೀಯ ನೇತೃತ್ವ ವಹಿಸಿದ್ದರು. 1973ರಲ್ಲಿ 'ಕರ್ನಾಟಕ'ದ ಹೆಸರಾದಾಗ, ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಸರ್ಕಾರ ರಾಜಧಾನಿ ಬೆಂಗಳೂರು ಸೇರಿ ಒಟ್ಟು ಮೂರು ಕಡೆ ಮರು ನಾಮಕರಣದ ಉತ್ಸವಗಳನ್ನು ಏರ್ಪಡಿಸಿತ್ತು.

ಕನ್ನಡದ ಮೊದಲ ಸಾಮ್ರಾಜ್ಯ ವಿಜಯನಗರ ರಾಜಧಾನಿ ಹಂಪಿಯಲ್ಲಿ ರಾಜ್ಯದ ಎರಡನೇ ಅಧಿಕೃತ ಕಾರ್ಯಕ್ರಮ, ಕರ್ನಾಟಕದ ಹೆಸರಿಗಾಗಿ ಹೋರಾಟ ರೂಪುಗೊಂಡ ನೆಲವೆಂಬ ಕಾರಣಕ್ಕೆ ಗದುಗಿನಲ್ಲಿ ಮೂರನೇ ಅಧಿಕೃತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. 1973ರ ನವೆಂಬರ್ 2ರಂದು ಹಂಪೆಯಲ್ಲಿ ಕನ್ನಡ ಜ್ಯೋತಿ ಬೆಳಗಿಸಿ, ಕನ್ನಡ ರಥವನ್ನು ಎಳೆಯಲಾಗಿತ್ತು. ಮರುದಿನ ಜ್ಯೋತಿಯೊಂದಿಗೆ ರಥವನ್ನು ಗದುಗಿಗೆ ತಂದು ಇಲ್ಲಿನ ವೀರ ನಾರಾಯಣ ದೇವಾಲಯದಿಂದ ಮೆರವಣಿಗೆ ಮಾಡಲಾಗಿತ್ತು. ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಸರ್ಕಾರಿ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿಸಲಾಗಿತ್ತು.

ಮರು ನಾಮಕರಣ ಸುವರ್ಣ ಮಹೋತ್ಸವವನ್ನು ಹಂಪಿ ಮತ್ತು ಗದುಗಿನಲ್ಲಿ ಐದು ದಶಕಗಳ ಹಿಂದೆ ಆಚರಿಸಿದಂತೆಯೇ ಈಗ ನಡೆಸಲು ಸರ್ಕಾರ ತೀರ್ಮಾನಿಸಿದ ಪರಿಣಾಮ ಗುರುವಾರ ಹಂಪೆಯಲ್ಲಿ ಕನ್ನಡ ಜ್ಯೋತಿ ಬೆಳಗಿಸಿ, ಶುಕ್ರವಾರ ಗದುಗಿನ ವೀರ ನಾರಾಯಣ ಗುಡಿಗೆ ಕನ್ನಡ ರಥದೊಂದಿಗೆ ತರಲಾಯಿತು.

ಆಗಿನಂತೆ ಈಗಲೂ ದೇವಾಲಯದಿಂದ ಇಲ್ಲಿನ ಕಾಟನ್ ಸೇಲ್ ಸೊಸೈಟಿ ಆವರಣದವರೆಗೆ ಮೆರವಣಿಗೆ ನಡೆದು ನಂತರ ಉದ್ಘಾಟನೆ ನೆರವೇರಿತು. 1961ರಲ್ಲಿ 43ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ನಡೆದು 'ಕರ್ನಾಟಕ' ಎಂಬ ಹೆಸರಿಡುವಂತೆ ನಿರ್ಣಯ ಕೈಗೊಂಡಿತ್ತು. ಮರು ನಾಮಕರಣದ ಅಧಿಕೃತ ಸಮಾರಂಭವೂ ಇದೇ ಆವರಣದಲ್ಲಿ ನಡೆದಿತ್ತು. ಈಗ ಸುವರ್ಣ ವರ್ಷಾಚರಣೆಗೂ ಕಾಟನ್ ಸೇಲ್ ಸೊಸೈಟಿ ಆವರಣ ಸಾಕ್ಷಿಯಾಯಿತು ಎಂಬುದು ಉಲ್ಲೇಖಾರ್ಹ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಸಭಾಪತಿ ಬಸವರಾಜ ಹೊರಟ್ಟಿ, ಕಾನೂನು ಮತ್ತು ಸಂಸದೀಯ ಸಚಿವರೂ ಆದ ಗದಗ ಜಿಲ್ಲಾ ಉಸ್ತುವಾರಿ ಮಂತ್ರಿ ಎಚ್.ಕೆ.ಪಾಟೀಲ, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ ಸೇರಿದಂತೆ ಸಚಿವ ಸಂಪುಟದ ಇಪ್ಪತ್ತಕ್ಕೂ ಹೆಚ್ಚು



ಗದಗ ನಗರಕ್ಕೆ ಶುಕ್ರವಾರ ಆಗಮಿಸಿದ ಕನ್ನಡ ರಥ ಮತ್ತು ಕರುನಾಡ ಜ್ಯೋತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವೀರ ನಾರಾಯಣ ದೇವಾಲಯದಲ್ಲಿ ಸ್ವೀಕರಿಸಿದ ನಂತರ ಮೆರವಣಿಗೆ ನಡೆಯಿತು.

ಸಚಿವರು, ಹಾಲಿ– ಮಾಜಿ ಜನಪ್ರತಿನಿಧಿಗಳು, ಐವತ್ತು ವರ್ಷದ ಹಿಂದಿನ ಕಾರ್ಯಕ್ರಮಕ್ಕೆ ಸಾಕ್ಷಿಯಾಗಿದ್ದ ಮಾಜಿ ಶಾಸಕ ಡಿ.ಆರ್.ಪಾಟೀಲ ಮೊದಲಾದ ಗಣ್ಯರು ಭಾಗಿಯಾಗಿದ್ದರು. ಸಮಾವೇಶಕ್ಕೂ ಮುನ್ನ ಈ ಗಣ್ಯರು ವೀರ ನಾರಾಯಣ ದೇವಾಲಯದಲ್ಲಿ ಕನ್ನಡ ಜ್ಯೋತಿ ಸ್ವೀಕರಿಸಿ, ಕಾರ್ಯಕ್ರಮ ಸ್ಥಳಕ್ಕೆ ಮೆರವಣಿಗೆಯಲ್ಲಿ ಆಗಮಿಸಿದರು. ಆ ನಂತರ ನಡೆದ ಸಮಾರಂಭದಲ್ಲಿ, ವರ್ಷವಿಡಿ ರಾಜ್ಯದಲ್ಲಿ ನಡೆಯಲಿರುವ ಮರು ನಾಮಕರಣ ಸುವರ್ಣ ಮಹೋತ್ಸವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧ್ಯುಕ್ತ ಚಾಲನೆ ನೀಡಿದರು.

'ನಲವತ್ತೊರನೇ ಕನ್ನಡ ಸಾಹಿತ್ಯ ಸಮ್ಮೇಳನ, ಮರು ನಾಮಕರಣ ಉತ್ಸವ ಆಚರಣೆ ಹಾಗೂ ಈಗ ಐವತ್ತು ವರ್ಷಗಳ ಆಚರಣೆ ಈ ಮೂರು ಇದೇ ಆವರಣದಲ್ಲಿ ನಡೆಯುತ್ತಿರುವುದು ಐತಿಹಾಸಿಕ' ಎಂದು ಬಣ್ಣಿಸಿದರು.

ಸುವರ್ಣ ಮಹೋತ್ಸವ ಉದ್ಘಾಟನೆಯ ಸವಿನೆನಪಿಗಾಗಿ ಕಾರ್ಯಕ್ರಮದ ರೂವಾರಿ, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಎಲ್ಲ ಗಣ್ಯರಿಗೆ ನಾಡದೇವಿ ಭುವನೇಶ್ವರಿ ಪ್ರತಿಮೆ ಮತ್ತು ಕನ್ನಡ ಸ್ಮರಣಿಕೆ ನೀಡಿ ಸತ್ಕರಿಸಿದರು. ನವೆಂಬರ್ 1ರಿಂದ 3ನೇ ತಾರೀಕಿನವರೆಗೆ ಗದುಗಿನಲ್ಲಿ ಅರ್ಥಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಇಡೀ ನಗರವನ್ನು ಕನ್ನಡ ಬಾವುಟಗಳೊಂದಿಗೆ ಅಲಂಕರಿಸಲಾಗಿತ್ತು. ಒಂದೇ ಮಾತಿನಲ್ಲಿ ಹೇಳುವುದಾದರೆ ಗದಗ ನಗರ ಕನ್ನಡದ ಜಾತ್ರೆಯಂತೆ ಗೋಚರಿಸುತ್ತಿತ್ತು. ಮೂರು ದಿನ ಊರ ಹಬ್ಬದ ವಾತಾವರಣವಿತ್ತು.

ಕನ್ನಡ ರಥ ಮತ್ತು ಜ್ಯೋತಿಯು ನವೆಂಬರ್ 4ರಿಂದ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸಂಚರಿಸಲಿದೆ. 2024ರ ಅಕ್ಟೋಬರ್ 31ರಂದು ಕನ್ನಡ ಜ್ಯೋತಿ ಯಾತ್ರೆ ಪೂರ್ಣಗೊಂಡು ಸುವರ್ಣ ವರ್ಷಾಚರಣೆ ಸಮಾರೋಪಗೊಳ್ಳಲಿದೆ.

# ಸರ್ವರ ಬದುಕು ಎತ್ತರಿಸಲು ಗ್ಯಾರಂಟಿ ಜಾರಿ

## ಗದಗದಲ್ಲಿ ಕರ್ನಾಟಕ ಸಂಭ್ರಮ–50 ಕಾರ್ಯಕ್ರಮ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ




ಗದುಗಿನಲ್ಲಿ ಶುಕ್ರವಾರ ನಡೆದ ಕರ್ನಾಟಕ-50 ಸಂಭ್ರಮ ಕಾರ್ಯಕ್ರಮದಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಹತ್ತು ಜಿಲ್ಲೆಗಳ ಗ್ರಾಮ ಚರಿತೆ ಕೋಶ ಪುಸ್ತಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಿಡುಗಡೆ ಮಾಡಿದರು. ಡಿಸಿಎಂ ಡಿ.ಕೆ. ಶಿವಕುಮಾರ, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಮಾತನಾಡಿದರು. ವಿಪ ಸಭಾಪತಿ ಬಸವರಾಜ ಹೊರಟ್ಟಿ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ವಿಧಾನಸಭಾಧ್ಯಕ್ಷ ಯು.ಟಿ. ಖಾದರ ಇತರರು ಇದ್ದರು.

• **ಕನ್ನಡಪ್ರಭ ವಾರ್ತೆ** ಗದಗ

ಕನ್ನಡ ಸಂಸ್ಕೃತಿ ಎಂದಾಗ ಬಸವಾದಿ ಶರಣರ ಕಾಯಕ ಸಂಸ್ಕೃತಿಯೂ ಸೇರಿದೆ. ಬಸವಣ್ಣನವರ ಆಶಯದಂತೆ ವರ್ಗರಹಿತ, ಜಾತಿರಹಿತ ಸಮಾಜದ ನಿರ್ಮಾಣ ಮತ್ತು ಈ ಸಮಾಜದ ಅಭಿವೃದ್ಧಿ ನಮ್ಮ ಗುರಿಯಾಗಿದೆ. ಆ ಕಾರಣಕ್ಕೇ ಸರ್ವ ಜಾತಿ-ಧರ್ಮದವರ ಬದುಕನ್ನು ಎತ್ತರಿಸುವ ಗ್ಯಾರಂಟಿ ಕಾರ್ಯಕ್ರಮಗಳನ್ನು ನಾವು ನೀಡಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಅವರು ಗದಗ ನಗರದ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಕರ್ನಾಟಕ ಸಂಭ್ರಮ-50 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಜಗತ್ತಿನಲ್ಲಿಯೇ 2 ಸಾವಿರ ವರ್ಷಗಳ ಇತಿಹಾಸವಿರುವ ಭಾಷೆ ನಮ್ಮದು. ಶೇಕ್ಸ್‌ಪಿಯರ್‌ಗಿಂತಲೂ ಮೊದಲೇ ನಮ್ಮ ಆದಿ ಕವಿ ಪಂಪ ಜನಿಸಿದ್ದ ಎನ್ನುವುದಕ್ಕೆ ನಮ್ಮ ಬಹುದೊಡ್ಡ ದಾಖಲೆಗಳಿವೆ. ಕನ್ನಡ ಕಲಿಯದೆಯೂ ಕರ್ನಾಟಕದಲ್ಲಿ ವ್ಯವಹರಿಸಬಹುದು ಎನ್ನುವ ವಾತಾವರಣ ಬದಲಾಗಬೇಕು. ಕನ್ನಡದ ಸಂಸ್ಕೃತಿ ಜತೆಗೆ ನಮ್ಮೆಲ್ಲರಲ್ಲಿ ಕನ್ನಡತನ ಬೇರೂರಬೇಕು. ಆಗ ಮಾತ್ರ ಕನ್ನಡದ ವಾತಾವರಣ ಇಡಿ ನಾಡಿನಲ್ಲಿ ಪಸರಿಸುತ್ತದೆ ಎಂದರು.

ಈ ಹಿಂದೆ ಕೆ.ಎಚ್. ಪಾಟೀಲರು ಇಡೀ ಜಿಲ್ಲೆಗೆ ಕುಡಿಯುವ ನೀರು ಕೊಟ್ಟರು. ಅವರ ಪುತ್ರ ಎಚ್.ಕೆ. ಪಾಟೀಲರು ಇಡೀ ರಾಜ್ಯಕ್ಕೆ ಶುದ್ಧ ಕುಡಿಯುವ ನೀರು ಕೊಟ್ಟಿದ್ದಾರೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ ಮತ್ತು ಗದಗ ಜಿಲ್ಲಾಡಳಿತ ಜಂಟಿಯಾಗಿ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಚಿವ ಎಚ್.ಕೆ.ಪಾಟೀಲ ಅವರು ವಹಿಸಿದ್ದರು.

### ಕಾಂತರಾಜ ವರದಿ ಕುರಿತು ಈಗಲೇ ಚರ್ಚೆ ಏಕೆ?

ಕಾಂತರಾಜ ವರದಿ ಸ್ವೀಕಾರದ ಬಗ್ಗೆ ಒಕ್ಕಲಿಗ ಸಮುದಾಯದಲ್ಲಿ ಅಸಮಾಧಾನವಿದೆ. ಈ ಕುರಿತು ಹಲವಾರು ಸ್ವಾಮೀಜಿಗಳ ನೇತೃತ್ವದಲ್ಲಿ ಸಭೆಯಾಗಿದೆ ಎನ್ನುವುದರ ಬಗ್ಗೆ ಉತ್ತರಿಸಿದ ಅವರು, ಅದರ ಬಗ್ಗೆ ನಾನು ಈಗ ಮಾತನಾಡುವುದಿಲ್ಲ, ಇನ್ನೂ ವರದಿ ಸ್ವೀಕಾರವೇ ಆಗಿಲ್ಲ, ಈಗಲೇ ಅದರ ಬಗ್ಗೆ ಚರ್ಚೆ ಏಕೆ? ಎಂದು ಪತ್ರಿಕಾಗೋಷ್ಠಿಯಲ್ಲಿ ಸಿಎಂ ಸಿದ್ದರಾಮಯ್ಯ ಹೇಳಿದರು.

### ಏನೂ ಮಾತನಾಡದ ಡಿಕೆಶಿ

ಸುದ್ದಿಗೋಷ್ಠಿಯಲ್ಲಿ ಸಿಎಂ ಸಿದ್ದರಾಮಯ್ಯ ಮಾತನಾಡುತ್ತಿದ್ದರೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಮಾತ್ರ ಏನೂ ಮಾತನಾಡದೇ ಸುಮ್ಮನ್ನೇ ಕುಳಿತಿದ್ದರು. ಸಿಎಂ ಗೋಷ್ಠಿ ಮುಗಿದ ನಂತರ ಪತ್ರಕರ್ತರು ಮಾತನಾಡಿ, ಮಾತನಾಡಿ ಎಂದರೂ ಮೌನವಾಗಿ ಹೊರ ನಡೆದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ, ವಿಪ ಸಭಾಪತಿ ಬಸವರಾಜ ಹೊರಟ್ಟಿ, ಸಚಿವ ಕೆ.ಎಚ್. ಮುನಿಯಪ್ಪ, ಶಿವರಾಜ ತಂಗಡಗಿ, ಲಕ್ಷ್ಮೀ ಹೆಬ್ಬಾಳ್ಕರ್, ಬೈರತಿ ಸುರೇಶ್, ಮಂಕಾಳು ವೈದ್ಯ, ಶರಣಪ್ರಕಾಶ್ ಪಾಟೀಲ್, ಶಿವಾನಂದ ಪಾಟೀಲ, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹಮದ್ ಸೇರಿ ಹಲವಾರು ಶಾಸಕರು ಇದ್ದರು.

## ಕೈ ಮುಗಿದು ಎಚ್.ಕೆ. ಪಾಟೀಲರ ಗೆಲ್ಲಿಸಿ ಎಂದ ಸಿದ್ದು

### ಎಚ್.ಕೆ. ಪಾಟೀಲರು ನಾಮಪತ್ರ ಸಲ್ಲಿಸಿದರೆ ಸಾಕು, ಮನೆಯಲ್ಲಿ ಕೂಡ್ರಿಸಿ ಗೆಲ್ಲಿಸಿ

• **ಕನ್ನಡಪ್ರಭ ವಾರ್ತೆ** ಗದಗ

ನಗರದ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಕರ್ನಾಟಕ ಸಂಭ್ರಮ-50 ಕರ್ನಾಟಕ ಏಕೀಕರಣವಾಗಿ 50 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮ ಹಲವಾರು ಐತಿಹಾಸಿಕ ಕ್ಷಣಗಳಿಗೆ ಸಾಕ್ಷಿಯಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲರ ವಿಶೇಷ ಶ್ರಮದಿಂದಾಗಿ ಗದಗ ನಗರದ ಚಿತ್ರಣವೇ ಬದಲಾಗಿ ಹೋಗಿದ್ದು, ಅವಳಿ ನಗರ ಸಂಪೂರ್ಣ ಕನ್ನಡಮಯವಾಗಿತ್ತು. ಬಂದಿದ್ದ ಸಾವಿರಾರು ಮನಸ್ಸುಗಳನ್ನು ಮಾತೃ ಭಾಷೆಗೆ ಮತ್ತಷ್ಟು ಹತ್ತಿರಗೊಳಿಸುವ ಕಾರ್ಯಕ್ಕೆ ವೇದಿಕೆ ನಾಂದಿ ಹಾಡಿತು.

**ಅಂದು ಕೆಎಚ್‌-ಇಂದು ಎಚ್‌ಕೆ:** 1973ರಲ್ಲಿ ದೇವರಾಜ ಅರಸು ಸಿಎಂ ಆಗಿದ್ದರು, ಕೆ.ಎಚ್. ಪಾಟೀಲರು ಮಂತ್ರಿಯಾಗಿದ್ದರು. ಅರಸು ಮೈಸೂರು ಮತ್ತು ನಾನು ಇಬ್ಬರೂ ಮೈಸೂರು ಜಿಲ್ಲೆಯವರು ಹೇಗಿದೆ ನೋಡಿ, ಇದು ಕಾಕತಾಳೀಯ ಎನ್ನಬಹುದು ಆದರೆ ಎಚ್.ಕೆ.ಪಾಟೀಲರ ಕುಟುಂಬ ರಾಜ್ಯದ ಅಭಿವೃದ್ಧಿಗೆ ನೀಡಿದ ಕೊಡುಗೆ ಮಾತ್ರ ಅಪಾರ ಹಾಗಾಗಿಯೇ ಅವರಿಗೆ ಸೇವೆ ಮಾಡಲು ಅವಕಾಶ ಸಿಕ್ಕಿದೆ ಎಂದು ಪಾಟೀಲ ಕುಟುಂಬದ ಸಾರ್ವಜನಿಕ ಸೇವೆಯನ್ನು ಸಿಎಂ ಸಿದ್ದರಾಮಯ್ಯ ಸ್ಮರಿಸಿಕೊಂಡರು.

**ಐತಿಹಾಸಿಕ ಕ್ಷಣ ಮರು ಸೃಷ್ಟಿಸಿದ ಎಚ್ಕೆ:** 1973ರ ನ. 3ರಂದು ನಡೆದ ಕರ್ನಾಟಕ ನಾಮಕರಣ ಸಂಭ್ರಮದ ಕಾರ್ಯಕ್ರಮವನ್ನು 2023ರ ನ. 3ರಂದು 50 ವರ್ಷದ ಸುವರ್ಣ ಸಂಭ್ರಮವನ್ನು ಪುನರಪಿಯಾಗಿ ಆಚರಿಸುವ ಮೂಲಕ ಐತಿಹಾಸಿಕ ಕ್ಷಣಕ್ಕೆ ಗದಗ ನಗರ ಸಾಕ್ಷಿಯಾಯಿತು.

ಜೊತೆಗೆ ಗಮನಾರ್ಹ ಸಂಗತಿ ಎಂದರೆ 1973ರ ನ. 3ರಂದು ಸಾಗಿದ ಮೆರವಣಿಗೆಯ ಹಾದಿಯಲ್ಲಿಯೇ 2023ರ ಮೆರವಣಿಗೆ ಸಾಗಿದ್ದು ಕೂಡಾ ವಿಶೇಷವಾಗಿತ್ತು. ಅಂದು ಕಾರ್ಯಕ್ರಮದ ಸ್ಥಳದಲ್ಲಿಯೇ ಇಂದೂ ಕೂಡಾ ಕಾರ್ಯಕ್ರಮ ಆಯೋಜನೆ ಮಾಡಿ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಐತಿಹಾಸಿಕ ಕ್ಷಣವನ್ನು ಮರು ಸೃಷ್ಟಿಸಿದ್ದರು.

> ನಾನು ಎರಡು ಬಾರಿ ಮುಖ್ಯಮಂತ್ರಿಯಾದರೂ ನನ್ನ ಜಿಲ್ಲೆಗೆ ಅಷ್ಟೊಂದು ಕೆಲಸ ಮಾಡಲು ಆಗಿಲ್ಲ, ಅಷ್ಟೊಂದು ಅಭಿವೃದ್ಧಿ ಕಾರ್ಯಗಳನ್ನು ಎಚ್.ಕೆ. ಪಾಟೀಲ ಅವರು ಮಾಡಿದ್ದಾರೆ. ಗದಗ ಜನ ಅವರು ನಾಮಪತ್ರ ಸಲ್ಲಿಸಿ ಮನೆಯಲ್ಲಿ ಕುಳಿತರೂ ಅವರನ್ನು ಗೆಲ್ಲಿಸಬೇಕು.
>
> • **ಸಿದ್ದರಾಮಯ್ಯ** ಸಿಎಂ

**ಕೈಮುಗಿದು ವಿನಂತಿಸಿದರು:** ತಮ್ಮ ಭಾಷಣದ ವೇಳೆಯಲ್ಲಿ ಸಿಎಂ ಸಿದ್ದರಾಮಯ್ಯ ಎಚ್.ಕೆ. ಪಾಟೀಲರು ಗದಗ ಜಿಲ್ಲೆಗೆ ಮಾಡಿದ ಪ್ರತಿಯೊಂದು ಅಭಿವೃದ್ಧಿ ಕಾರ್ಯಗಳನ್ನು ನೆನಪು ಮಾಡಿಕೊಳ್ಳುತ್ತಾ, ನಾನು ಎರಡು ಬಾರಿ ಮುಖ್ಯಮಂತ್ರಿಯಾದರೂ ನನ್ನ ಜಿಲ್ಲೆಗೆ ಅಷ್ಟೊಂದು ಕೆಲಸ ಮಾಡಲು ಆಗಿಲ್ಲ, ಅಷ್ಟೊಂದು ಅಭಿವೃದ್ಧಿ ಕಾರ್ಯಗಳನ್ನು ಅವರು ಮಾಡಿದ್ದಾರೆ. ಗದಗ ಜನ ಅವರು ನಾಮಪತ್ರ ಸಲ್ಲಿಸಿ ಮನೆಯಲ್ಲಿ ಕುಳಿತರೂ ಅವರನ್ನು ಗೆಲ್ಲಿಸಬೇಕು ಎಂದು ವೇದಿಕೆಯಲ್ಲಿಯೇ ಕೈ ಮುಗಿದು ವಿನಂತಿಸಿದರು.

**ಗದಗ-ಬೆಟಗೇರಿ ನೀರು ಪೂರೈಕೆಗೆ ಅಗತ್ಯವಿದ್ದರೆ ಹಣ:** ಗದಗ-ಬೆಟಗೇರಿ ಅವಳಿ ನಗರದ ಕುಡಿಯುವ ನೀರಿನ ವ್ಯವಸ್ಥೆಯನ್ನು ಇನ್ನಷ್ಟು ಸಮರ್ಪಕಗೊಳಿಸಲು ಈಗಾಗಲೇ 61 ಕೋಟಿ ನೀಡಿದ್ದೇವೆ. ಅಗತ್ಯಬಿದ್ದರೆ ಮತ್ತಷ್ಟು ಹಣ ಕೊಡಲು ನಮ್ಮ ಸರ್ಕಾರ ಸಿದ್ಧವಿದೆ ಎಂದು ಭರವಸೆ ನೀಡಿದರು.

# ಕರ್ನಾಟಕ ಸರ್ವಜನಾಂಗದ ಶಾಂತಿಯ ತೋಟವಾಗಿಸೋಣ

## ಕರ್ನಾಟಕ ಸಂಭ್ರಮ-50 ಸಮಾರಂಭದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ | ಶಾಂತಿಯಿಂದ ಬಾಳುವಂತಾಗಲಿ

• **ಕನ್ನಡಪ್ರಭ ವಾರ್ತೆ** ಗದಗ

ನಮ್ಮ ರಾಜ್ಯವನ್ನು ಎಲ್ಲಾ ಕನ್ನಡಿಗರು ಸೇರಿಕೊಂಡು, ಸರ್ವ ಜನಾಂಗದ ಶಾಂತಿಯ ತೋಟವಾಗಿ ಮುಂದುವರಿಯಲು ಎಲ್ಲರೂ ಶ್ರಮಿಸೋಣ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಕರೆನೀಡಿದರು.

ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಗರದ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಜರುಗಿದ ಮೈಸೂರು ರಾಜ್ಯಕ್ಕೆ ಕರ್ನಾಟಕ ಮರುನಾಮಕರಣ ಸುವರ್ಣ ಮಹೋತ್ಸವದ ಕರ್ನಾಟಕ ಸಂಭ್ರಮ-50 ಸಮಾರಂಭದಲ್ಲಿ ಅವರು ಮಾತನಾಡಿದರು.

ಕರ್ನಾಟಕ ಸುವರ್ಣ ಮಹೋತ್ಸವ ಆಚರಿಸುತ್ತಿರುವ ಈ ಶುಭ ಗಳಿಗೆ ಹೆಮ್ಮೆಯ ವಿಷಯವಾಗಿದೆ. ಅನೇಕ ಜನರ ತ್ಯಾಗ ಬಲಿದಾನ ಹಾಗೂ ಸಹಕಾರದಿಂದ ಕರ್ನಾಟಕ ರೂಪುಗೊಂಡಿದೆ ಎಂಬ ಸಂಗತಿಯನ್ನು ವಿದ್ಯಾರ್ಥಿಗಳು ಅರಿತುಕೊಳ್ಳಬೇಕು. ನಾಡಿನ ಸರ್ವ ಜನಾಂಗದ ಜನರು ಪರಸ್ಪರ ಶಾಂತಿ ನೆಮ್ಮದಿಯಿಂದ ಬಾಳುವಂತಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ ತಂಗಡಗಿ ಮಾತನಾಡಿ, ಕರ್ನಾಟಕ ನಾಮಕರಣ ಸುವರ್ಣ ಮಹೋತ್ಸವ ಆಚರಣೆ ನಿಮಿತ್ತ ನವೆಂಬರ್1ರಿಂದ ಮುಂದಿನ ವರ್ಷ ಅಕ್ಟೋಬರ್31ರ ವರೆಗೆ ರಾಜ್ಯಾದ್ಯಂತ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯವೆಂದು ನಾಮಕರಣಗೊಂಡು 50 ವರ್ಷ ಪೂರೈಸಿದ ಸವಿನೆನಪಿಗಾಗಿ ರಾಜ್ಯ ಸರ್ಕಾರವು ಅಂಚೆ ಚೀಟಿ ಹಾಗೂ ನಾಣ್ಯಗಳನ್ನು ಬಿಡುಗಡೆಗೊಳಿಸಲು ನಿರ್ಧರಿಸಿದೆ. ಕನ್ನಡ ನಾಡು ನುಡಿ ಜಲ ವಿಷಯ ಸೇರಿದಂತೆ ಕನ್ನಡಿಗರ ಅಭಿಮಾನ ಹೆಚ್ಚಿಸುವ ಕಾರ್ಯಕ್ರಮಗಳನ್ನು ವರ್ಷಪೂರ್ತಿ ನಡೆಸಲಾಗುವುದು ಎಂದರು.

1973ರಲ್ಲಿ ಮೈಸೂರು ರಾಜ್ಯ ಕರ್ನಾಟಕ ರಾಜ್ಯವೆಂದು ನಾಮಕರಣಗೊಂಡಿತು. ಅಂದಿನ ಮುಖ್ಯಮಂತ್ರಿ ಡಿ. ದೇವರಾಜ ಅರಸ್ ಹಾಗೂ ಮಾಜಿ ಸಚಿವ ಡಿ. ಕೆ. ಎಚ್. ಪಾಟೀಲ ಅವರ ನೇತೃತ್ವದಲ್ಲಿ ಮೈಸೂರು ರಾಜ್ಯಕ್ಕೆ ಕರ್ನಾಟಕ ರಾಜ್ಯ ಎಂದು ನಾಮಕರಣ ಎಂದು ಗದಗ ನಗರದಲ್ಲಿ ಠರಾವು ಪಾಸು ಮಾಡಿದ್ದು ಇತಿಹಾಸದಲ್ಲಿದೆ. ಕರ್ನಾಟಕ ನಾಮಕರಣಕ್ಕೆ 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಅನೇಕ ಸಾಧಕರಿಗೆ ಸನ್ಮಾನಿಸಲಾಗಿದೆ. ಜೊತೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕುಮಾರವ್ಯಾಸ ರಚಿತ ಗದುಗಿನ ಭಾರತ ಪುಸ್ತಕವನ್ನು ಮರುಮುದ್ರಿಸಿ ಕಡಿಮೆ ದರದಲ್ಲಿ ಜನರಿಗೆ ನೀಡಲಾಗುವುದು. ಡಿಜಿಟಲೀಕರಣಕ್ಕೆ ಆದ್ಯತೆ ನೀಡಲಾಗುವುದು ಎಂದರು.

ಈ ವೇದಿಕೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ, ವಿಪ ಸಭಾಪತಿ ಬಸವರಾಜ ಹೊರಟ್ಟಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವ ಕೆ.ಎಚ್. ಮುನಿಯಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಕಂದಾಯ ಸಚಿವ ಕೃಷ್ಣ ಭೈರೇಗೌಡ, ಪೌರಾಡಳಿತ ಸಚಿವ ರಹೀಂಖಾನ್, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ, ಜವಳಿ ಮತ್ತು ಸಕ್ಕರೆ ಸಚಿವ ಶಿವಾನಂದ ಪಾಟೀಲ್, ಮೀನುಗಾರಿಕೆ ಸಚಿವ ಮಂಕಾಳ ವೈದ್ಯ, ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್, ವಿಧಾನ ಪರಿಷತ್ ಉಪ ಸಭಾಪತಿ ರುದ್ರಪ್ಪ ಲಮಾಣಿ, ಶಾಸಕರಾದ ಜಿ.ಎಸ್. ಪಾಟೀಲ್, ಶ್ರೀನಿವಾಸ ಮಾನೆ, ಎಸ್.ವಿ. ಸಂಕನೂರ, ಬಸವರಾಜ ಶಿವಣ್ಣವರ, ಜೆ.ಟಿ. ಪಾಟೀಲ್, ಎನ್.ಎಚ್. ಕೋನರಡ್ಡಿ, ಮಾಜಿ ಲೋಕಸಭಾ ಸದಸ್ಯ ಮಂಜುನಾಥ ಕುನ್ನೂರ, ಐ.ಜಿ. ಸನದಿ, ಗದಗ-ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ, ಮಾಜಿ ಶಾಸಕರುಗಳಾದ ಡಿ.ಆರ್. ಪಾಟೀಲ, ಜಿ.ಎಸ್. ಗಡ್ಡದ್ದೇವರಮಠ, ಬಿ.ಆರ್. ಯಾವಗಲ್, ರಾಮಣ್ಣ ಲಮಾಣಿ, ನಂಜಯ್ಯನಮಠ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ಭಾಗಿಯಾಗಿದ್ದರು.




ಗದುಗಿನಲ್ಲಿ ನಡೆದ ಐತಿಹಾಸಿಕ ಕಾರ್ಯಕ್ರಮವನ್ನು ಉದ್ದೇಶಿಸಿ ಸಚಿವ ಶಿವರಾಜ ತಂಗಡಗಿ ಮಾತನಾಡಿದರು.

### ಸಿಎಂ ಸಿದ್ದುಗೆ ಪೌರ ಸನ್ಮಾನ

ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾದ ಬಳಿಕ ಮೊದಲ ಬಾರಿಗೆ ಗದಗ ನಗರಕ್ಕೆ ಆಗಮಿಸಿದ ಸಿದ್ದರಾಮಯ್ಯ ಅವರಿಗೆ ಪೌರ ಸನ್ಮಾನವನ್ನು ನೆರವೇರಿಸಿ, ಅವಳಿ ನಗರದ ಬೇಡಿಕೆಗಳ ಕುರಿತ ಮನವಿ ಪತ್ರವನ್ನು ನಗರಸಭೆ ಅಧ್ಯಕ್ಷೆ ಉಷಾ ದಾಸರ ನೇತೃತ್ವದಲ್ಲಿ ಸಲ್ಲಿಸಲಾಯಿತು.

GADAG Edition



> **ಕರ್ನಾಟಕದಲ್ಲಿ ಉತ್ತರ ಕರ್ನಾಟಕ ಎಂದು ಪ್ರತ್ಯೇಕ ಮಾಡುವುದು ಸರಿಯಲ್ಲ, ನಮ್ಮ ರಾಜ್ಯ ಅಖಂಡ ಕರ್ನಾಟಕವಾಗಿರಬೇಕು. ನಮ್ಮಲ್ಲಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎಂದು ಬೇಧಭಾವ ಮಾಡಬಾರದು. ಸರ್ಕಾರ ತಾರತಮ್ಯ ಮಾಡದೆ ಸಮಾನತೆ ಕಾಣಬೇಕು. ದೇಶದಲ್ಲಿ ಕರ್ನಾಟಕವನ್ನು ಮಾದರಿ ರಾಜ್ಯವನ್ನಾಗಿ ಮಾಡಲು ನಾವೆಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಬೇಕು.**
>
> ■ **ಬಸವರಾಜ ಹೊರಟ್ಟಿ** ವಿಧಾನ ಪರಿಷತ್ ಸಭಾಧ್ಯಕ್ಷರು

ಹಮ್ಮಿಕೊಳ್ಳಲಾಗಿದೆ. ಹಾಗೂ ವರ್ಷಪೂರ್ತಿ ರಾಜ್ಯಾದ್ಯಂತ ಕನ್ನಡದ ತೇರು ಎಳೆಯುತ್ತ ವರ್ಷದ ಕೊನೆಯ ಅಕ್ಟೋಬರ್ 31ರಂದು ಬೆಂಗಳೂರಿನಲ್ಲಿ ಸಮಾರೋಪ ಹಮ್ಮಿಕೊಳ್ಳಲಾಗುವುದು. ಬೆಂಗಳೂರಿನಲ್ಲಿ 25 ಅಡಿ ಎತ್ತರದ ತಾಯಿ ಭುವನೇಶ್ವರಿಯ ಕಂಚಿನ ಮೂರ್ತಿಯನ್ನು ಅನಾವರಣಗೊಳಿಸಲಾಗುವುದು ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಮಾತನಾಡಿ, ಕರ್ನಾಟಕ ನಾಮಕರಣದಲ್ಲಿ ಗದುಗಿನವರಾದ ಆಲೂರ ವೆಂಕಟರಾಯರು, ಜ್ಞಾನದೇವ ದೊಡ್ಡಮೇಟಿ, ಕೆ.ಎಚ್.ಪಾಟೀಲ ಅವರ ಹೋರಾಟ ಇದೇ ನೆಲದಿಂದ ಆರಂಭವಾಗಿದೆ. ಕರ್ನಾಟಕ ಏಕೀಕರಣದಲ್ಲಿ ಹುಯಿಲಗೋಳ ನಾರಾಯಣರಾವ್ ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು ಬೀಜ ಮಂತ್ರವಾಗಿತ್ತು ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕರ್ನಾಟಕ ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್, ಸಚಿವರಾದ ಕೆ.ಎಚ್.ಮುನಿಯಪ್ಪ, ಲಕ್ಷ್ಮೀ ಹೆಬ್ಬಾಳ್ಕರ್, ಬೈರತಿ ಸುರೇಶ್, ಮಂಕಾಳ ವೈದ್ಯ, ಶರಣಪ್ರಕಾಶ್ ಪಾಟೀಲ, ಶಿವಾನಂದ ಪಾಟೀಲ್, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹಮದ್, ವಿಧಾನಪರಿಷತ್ ಸದಸ್ಯ ಎಸ್.ವಿ.ಸಂಕನೂರ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.